# ಘಟನೆಗಳಲ್ಲಿ ಗಾಂಧಿ

ಜಿ.ಎಸ್. ಜಯದೇವ್

*(ಹಿಂದಿನ ಸಂಚಿಕೆಯಿಂದ)*

## ಗಾಂಧೀಜಿಯವರ ಅಹಿಂಸಾತರಂಗಗಳು



ಗಾಂಧೀಜಿ ಅಹಿಂಸೆಯನ್ನು ರಕ್ತಗತ ಮಾಡಿಕೊಂಡಿದ್ದರು. ಅಹಿಂಸೆಯ ಸ್ಪಂದನ ಅವರು ಇರುವಲ್ಲೆಲ್ಲಾ ಪಸರಿಸಿ ಮನುಷ್ಯ ಪ್ರಾಣಿಗಳಲ್ಲೆಲ್ಲಾ ವ್ಯಾಪಿಸಿಬಿಡುತ್ತಿತ್ತು. ಈ ಅಹಿಂಸಾ ಸ್ಪಂದನಗಳೇ ಅವರಿಗಿದ್ದ ಶ್ರೀರಕ್ಷೆ.

ಹಿಂದೂ–ಮುಸ್ಲಿಂರ ನಡುವೆ ಸಾಮರಸ್ಯ ಮೂಡಿಸಲು ಅವರು ಬಹಳ ಶ್ರಮಿಸುತ್ತಿದ್ದರು. ಅವರ ಪ್ರಯತ್ನ ಸ್ವಲ್ಪಮಟ್ಟಿಗಾದರೂ ಫಲ ಕೊಟ್ಟಿತು. ಬೆರಳೆಣಿಕೆಯ ಹಿಂದೂ–ಮುಸ್ಲಿಮರಾದರೂ ಹೊಂದಿಕೊಂಡು ಬಾಳತೊಡಗಿದರು. ದ್ವೇಷದ ದಾವಾನಲವನ್ನು ನಂದಿಸಿಬಿಡುತ್ತಿದ್ದ ಗಾಂಧೀಜಿಯ ಮಹಿಮೆ ಕೆಲವರಿಗೆ ಸಹಿಸಲಾಗುತ್ತಿರಲಿಲ್ಲ. 'ಗಾಂಧೀಜಿ ಕೀ ಜೈ' ಎಂದು ಎಷ್ಟೋ ಜನ ಕೂಗಿದರೂ, ಅಲ್ಲಲ್ಲಿ ಕೆಲವರಾದರೂ ಗಾಂಧೀಜಿಯನ್ನು ದ್ವೇಷಿಸುತ್ತಿದ್ದರು; ಎಷ್ಟೋ ವೇಳೆ ಗಾಂಧೀಜಿಯನ್ನು ಸಾಯಿಸಬೇಕೆಂದು ಪ್ರಯತ್ನಿಸುತ್ತಿದ್ದರು. ಅಂಗರಕ್ಷಕರಾರೂ ಇಲ್ಲದ, ಸದಾಕಾಲವೂ ಸಾರ್ವಜನಿಕರ ಮಧ್ಯೆ ಇರುತ್ತಿದ್ದ ಗಾಂಧೀಜಿಯ ಮೇಲೆ ಯಾರು ಬೇಕಾದರೂ ದಾಳಿ ಮಾಡಬಹುದಾಗಿತ್ತು. ಗಾಂಧೀಜಿ ಮಾತ್ರ, "ದೇವರು ರಕ್ಷಿಸುವವರೆಗೆ ನಾನು ಬದುಕುತ್ತೇನೆ" ಎಂದು ನಿರಾಳವಾಗಿದ್ದರು.

ಈ ಹಿನ್ನೆಲೆಯಲ್ಲಿ ನಡೆದ ಘಟನೆಯೊಂದು ಹೀಗಿದೆ. ಒಂದು ಹಳ್ಳಿಯಲ್ಲಿ ಗಾಂಧೀಜಿ ಪ್ರವಾಸ ಕೈಗೊಂಡಿದ್ದರು. ಅವರು ನಡೆದುಹೋಗುತ್ತಿದ್ದಾಗ ಕೋಪದಿಂದ ಕೆಂಡವಾದ ಒಬ್ಬ ಮನುಷ್ಯ ಜನರನ್ನು ತಳ್ಳಿಕೊಂಡು ಗಾಂಧೀಜಿಯ ಕಡೆಗೆ ನುಗ್ಗಿದ. ನಿಸ್ಸಹಾಯಕರಾಗಿ ನೋಡುತ್ತಿದ್ದ ಜನರೆದುರಿಗೆ ಗಾಂಧೀಜಿಯ ಕುತ್ತಿಗೆಗೆ ಕೈ ಹಾಕಿ ಹಿಸುಕಲಾರಂಭಿಸಿದ. ಆದರೆ ಗಾಂಧೀಜಿಯವರ ಮುಖದಲ್ಲಿ ಸ್ವಲ್ಪವೂ ಕೋಪ ಕಂಡುಬರಲಿಲ್ಲ. ಶಾಂತಚಿತ್ತರಾಗಿ ಮುಂದೇನು ಘಟಿಸುತ್ತದೆ ಎಂದು ಪ್ರೇಕ್ಷಕನಂತೆ ನಿರ್ವಿಕಾರಚಿತ್ತದಿಂದ ವೀಕ್ಷಿಸುತ್ತಿದ್ದರು. ಗಾಂಧೀಜಿಯವರ ಶುದ್ಧ ಮನಸ್ಸಿನಿಂದ ಪಸರಿಸುತ್ತಿದ್ದ ಅಹಿಂಸೆಯ ಸ್ಪಂದನಗಳು ಆ ಕ್ರೂರಿಯ ಹೃದಯವನ್ನು ಪ್ರವೇಶಿಸಿದವು. ಅವನ ಹೃದಯ ಏಕಾಏಕಿ ಪರಿವರ್ತನೆಯಾಯಿತು; ಸಣ್ಣ ಮಗುವಿನಂತೆ ಅಳುತ್ತಾ ಗಾಂಧೀಜಿಯವರ ಪದತಲದಲ್ಲಿ ಕುಸಿದುಬಿದ್ದ.

ಮತ್ತೊಂದು ಘಟನೆ ಹೀಗಿದೆ. ಒಂದು ಸಂಜೆ ಪ್ರಾರ್ಥನಾಸಭೆ ನಡೆಯುತ್ತಿತ್ತು. ಆಗ ಒಂದು ನಾಗರಹಾವು ಜನರ ನಡುವೆ ನುಗ್ಗಿತು. ಜನರು ಹೆದರಿ ದಾರಿ ಬಿಟ್ಟರು. ನಾಗರಹಾವು ನೇರವಾಗಿ ವೇದಿಕೆಯ ಮೇಲೇರಿತು. ಗಾಂಧೀಜಿ ಮಾತ್ರ ವಿಚಲಿತರಾಗದೆ ಸುಮ್ಮನೆ ಕುಳಿತಿದ್ದಾರೆ. ಎಲ್ಲರೂ ಆತಂಕಗೊಂಡು ಹಾವು ಮುಂದೇನು ಮಾಡುತ್ತದೆಂದು ತದೇಕಚಿತ್ತದಿಂದ ನೋಡುತ್ತಿದ್ದರು. ಹಾವು ನಿಧಾನವಾಗಿ ಹರಿದುಬಂದು ಗಾಂಧೀಜಿಯವರ ಕಾಲಿನ ಮೇಲೆ ಸರಿದು ತನ್ನ ಪಾಡಿಗೆ ತಾನು ಕತ್ತಲಲ್ಲಿ ಮಾಯವಾಯಿತು.

ಇದೇ ಬಗೆಯ ಘಟನೆ ರಮಣ ಮಹರ್ಷಿಗಳ ಜೀವನದಲ್ಲೂ ನಡೆಯಿತು. ಒಮ್ಮೆ ಅವರು ಅರುಣಾಚಲ ಬೆಟ್ಟದ ಗುಹೆಯಲ್ಲಿ ಇದ್ದಾಗ ಒಂದು ಹಾವು ಅವರು ಚಾಚಿಕೊಂಡಿದ್ದ ಕಾಲಿನ ಮೇಲೆ ನಿಧಾನವಾಗಿ ಹರಿದುಹೋಯಿತು. ಹೆದರಿ ನಿಬ್ಬೆರಗಾಗಿ ಇದನ್ನು ವೀಕ್ಷಿಸಿದ ಭಕ್ತರು ಹಾವು ಹೋದನಂತರ ಸುಧಾರಿಸಿಕೊಂಡು ಕೇಳಿದರು, "ಹಾವು ಹರಿದಾಗ ಹೇಗಿತ್ತು?" ರಮಣ ಮಹರ್ಷಿಗಳು ನಗುತ್ತಾ ಹೇಳಿದರು, "ತಣ್ಣಗೆ, ಮೆತ್ತಗೆ ಇತ್ತು." ಇದು ಕೇವಲ ಮನೋನಿಗ್ರಹದ ಪ್ರಶ್ನೆಯಲ್ಲ. ಅಹಿಂಸೆಯನ್ನು ಆಳವಾಗಿ ರೂಢಿಸಿಕೊಂಡಿರುವವರ ನಡವಳಿಕೆ ಹೇಗಿರುತ್ತದೆ ಎಂಬುದಕ್ಕೆ ಒಂದು ಉದಾಹರಣೆ.

ಈ ಇಬ್ಬರು ಮಹಾತ್ಮರ ಮೇಲೂ ಹಾವು ಹರಿಯಿತು ಮಾತ್ರ. ಆದರೆ ಅವರನ್ನು ಕಚ್ಚಲಿಲ್ಲ. ಇಂತಹ ಸಂದರ್ಭದಲ್ಲಿ ಒಂದು ವೇಳೆ ಹಾವು ಕಚ್ಚಿಬಿಟ್ಟಿದ್ದರೆ ಅವರ ಮನಸ್ಸು ಹೇಗೆ ಸ್ಪಂದಿಸುತ್ತಿತ್ತು ಎಂದು ಕುತೂಹಲ ಉಂಟಾಗುತ್ತದೆ, ಅಲ್ಲವೆ? ಈ ಪ್ರಶ್ನೆಗೂ ಉತ್ತರ ನೀಡುವ ಘಟನೆಯೊಂದು ಪವಾಹಾರಿ ಬಾಬಾ ಅವರ ಜೀವನದಲ್ಲಿ ನಮಗೆ ದೊರೆಯುತ್ತದೆ. ಹಾವೊಂದು ಅವರ ಮೇಲೆ ಹರಿದದ್ದಷ್ಟೇ ಅಲ್ಲ, ಅವರನ್ನು ಕಚ್ಚಿಯೂ ಬಿಟ್ಟಿತು. ಅದೃಷ್ಟ ಚೆನ್ನಾಗಿತ್ತು, ವಿಷ ಹೆಚ್ಚು ಪರಿಣಾಮ ಬೀರಲಿಲ್ಲ. ಪವಾಹಾರಿ ಬಾಬಾ ಬದುಕುಳಿದರು. ಅನಂತರ ಅವರನ್ನು ಈ ಘಟನೆಯ ಬಗ್ಗೆ ಕೇಳಿದಾಗ, ಅವರು ನಗುತ್ತಾ ಹೇಳಿದರು, **ನನ್ನ ಪ್ರಿಯತಮನಿಂದ ನನಗೆ ಓಲೆ ಬಂದಿತ್ತು.**

## ಗಾಂಧೀಜಿ ಹೊಲಿದುಕೊಟ್ಟ ಚಪ್ಪಲಿ

ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯವರು ಭಾರತೀಯರ ಹಿತರಕ್ಷಣೆಗಾಗಿ ಕೆಲಸ ಮಾಡಿದರು. ಹೀಗೆ ಕೆಲಸ ಮಾಡುವಾಗ ದ್ವೇಷಕ್ಕೆ ದ್ವೇಷ, ಹಿಂಸೆಗೆ ಹಿಂಸೆ ಎಂಬ ಸಾಮಾನ್ಯ ನಿಯಮಕ್ಕೆ ಹೊರತಾಗಿ ದ್ವೇಷಕ್ಕೆ ಪ್ರೀತಿಯನ್ನು ಹಿಂದಿರುಗಿಸುವ ತಮ್ಮ ಹೊಸ ವಿಧಾನವನ್ನು ಆಚರಣೆಗೆ ತಂದರು. ಇದೇ ಸತ್ಯಾಗ್ರಹದ ಮೂಲತತ್ವವಾಯಿತು. ಸತ್ಯವನ್ನು ಆಗ್ರಹಿಸಿ ಪ್ರೀತಿಯಿಂದ ಎದುರಾಳಿಯನ್ನು ಗೆಲ್ಲಬಹುದಾದ ಕಲ್ಪನೆ ಗಾಂಧೀಜಿಗೆ ಹೊಳೆದದ್ದು ದಕ್ಷಿಣ ಆಫ್ರಿಕಾದಲ್ಲೆ. ಅಲ್ಲಿನ ಟ್ರಾನ್ಸ್‌ವಾಲ್ ರಾಜ್ಯದ ಸರ್ಕಾರ ಭಾರತೀಯರಿಗೆ ಅನ್ಯಾಯವಾಗುವ, ಅಪಮಾನವಾಗುವ ಕಾನೂನುಗಳನ್ನು ಜಾರಿಗೆ ತಂದಿತು. ಈ ಅನ್ಯಾಯವನ್ನು ಪ್ರತಿಭಟಿಸಿ ಗಾಂಧೀಜಿ ಸತ್ಯಾಗ್ರಹ ಪ್ರಾರಂಭಿಸಿದರು. "ಅವರು ನನ್ನ ಶವವನ್ನು ವಶಪಡಿಸಿಕೊಳ್ಳಬಹುದೇ ಹೊರತು, ನನ್ನ ವಿಧೇಯತೆಯನ್ನಲ್ಲ; ಈ ಕಾನೂನಿಗೆ ನಾವು ಶರಣಾಗುವುದಿಲ್ಲ" ಎಂದು ದೃಢವಾಗಿ ಹೇಳಿದರು. ಪರಿಸ್ಥಿತಿ ಗಂಭೀರವಾಯಿತು. ಆದರೆ ಗಾಂಧೀಜಿ ಮಾತ್ರ ಯಾವ ಸಂದರ್ಭದಲ್ಲೂ ತಾಳ್ಮೆ ಕಳೆದುಕೊಳ್ಳಲಿಲ್ಲ. ನಗುನಗುತ್ತಲೇ ಪರಿಸ್ಥಿತಿಯನ್ನು ಸ್ಥಿರವಾಗಿ ಎದುರಿಸುತ್ತಿದ್ದರು.

ಈ ಸಂದರ್ಭದಲ್ಲಿ ಟ್ರಾನ್ಸ್‌ವಾಲ್ ಸರ್ಕಾರದ ಮುಖ್ಯಸ್ಥ ಜನರಲ್ ಸ್ಮಟ್ಸ್‌ನನ್ನು ಗಾಂಧೀಜಿ ಮುಖಾಮುಖಿಯಾಗಿ ಭೇಟಿಯಾದರು. ಇವರಿಬ್ಬರ ನಡುವೆ ನಡೆದ ಸಂಭಾಷಣೆ ಸತ್ಯ ಅಹಿಂಸೆಗಳು ಗಾಂಧೀಜಿಗೆ ಕೊಟ್ಟ ಧೈರ್ಯ, ಶಕ್ತಿಗಳನ್ನು ಎತ್ತಿತೋರಿಸುತ್ತವೆ. ಗಾಂಧೀಜಿ ಜನರಲ್ ಸ್ಮಟ್ಸ್‌ಗೆ ಹೇಳಿದರು, "ನಾನು ನಿಮ್ಮ ಸರ್ಕಾರದ ವಿರುದ್ಧ ಹೋರಾಡಲು ನಿರ್ಧರಿಸಿದ್ದೇನೆ. ಈ ವಿಷಯವನ್ನು ನಿಮಗೆ ತಿಳಿಸಲು ಬಂದಿದ್ದೇನೆ." ಸ್ಮಟ್ಸ್‌ನಿಗೆ ಇದೊಂದು ತಮಾಷೆಯ ಸಂಗತಿಯಾಗಿ ಕಂಡಿರಬೇಕು. ಅವನು ಆಶ್ಚರ್ಯಚಕಿತನಾಗಿ ನಗುತ್ತಾ ಹೇಳಿದ, "ಏನು, ನೀವು ಈ ವಿಷಯವನ್ನು ಹೇಳಲು ಬಂದಿರಾ?" ಮತ್ತೆ ನಕ್ಕು ಹೇಳಿದ, "ನೀವು ಇನ್ನೂ ಏನನ್ನಾದರೂ ಹೇಳುವುದಿದೆಯೆ?" ಗಾಂಧೀಜಿ ಹೇಳಿದರು, "ಹೌದು, ನಾನು ಅದರಲ್ಲಿ ಜಯ ಗಳಿಸುತ್ತೇನೆ." ಜನರಲ್ ಸ್ಮಟ್ಸ್‌ನಿಗೆ ಇದೊಂದು ಚೋದ್ಯವಾಗಿ ಕಂಡಿರಬೇಕು. ನಗುತ್ತಾ ಕೇಳಿದ, "ಹೇಗೆ ಜಯ ಗಳಿಸುತ್ತೀರಿ?" ಗಾಂಧೀಜಿ ಹೇಳಿದರು, "ನಿಮ್ಮ ಸಹಾಯದಿಂದ."

ದಕ್ಷಿಣ ಆಫ್ರಿಕಾದ ಸತ್ಯಾಗ್ರಹದಲ್ಲಿ ಭಾರತೀಯರೆಲ್ಲರೂ ಪಾಲ್ಗೊಂಡರು. ಸಾವಿರಾರು ಜನ ಜೈಲಿಗೆ ಹೋದರು. ಗಾಂಧೀಜಿಯನ್ನು ಕೂಡ ಬಂಧಿಸಿ ಜೈಲಿಗೆ ಹಾಕಿದರು. ಗಾಂಧೀಜಿ ಜೈಲಿನಲ್ಲಿದ್ದಾಗ ಜನರಲ್ ಸ್ಮಟ್ಸ್‌ನಿಗಾಗಿ ಒಂದು ಜೊತೆ ಚಪ್ಪಲಿಯನ್ನು ಹೊಲಿದರು. ೧೯೧೪ ರಲ್ಲಿ ಭಾರತಕ್ಕೆ ಹಿಂದಿರುಗುವ ಮೊದಲು ಈ ಚಪ್ಪಲಿಗಳನ್ನು ಜನರಲ್ ಸ್ಮಟ್ಸ್‌ನಿಗೆ ಉಡುಗೊರೆಯಾಗಿ ಕಳುಹಿಸಿಕೊಟ್ಟರು. ಈ ಚಪ್ಪಲಿಗಳು ಕೇವಲ ಚಪ್ಪಲಿಗಳಾಗಿರಲಿಲ್ಲ. ಗಾಂಧೀಜಿಯವರ ಸಹನೆಯ ಕುರುಹಾಗಿದ್ದವು; ತಮ್ಮ ಮನಸ್ಸಿನಲ್ಲಿ ಕಿಂಚಿತ್ತೂ ದ್ವೇಷವಿಲ್ಲವೆಂದು ತೋರುವ ಪ್ರೀತಿಯ ಪ್ರತೀಕವಾಗಿದ್ದವು. ಗಾಂಧೀಜಿ ಭಾರತಕ್ಕೆ ಮರಳಿದ ನಂತರ ಸ್ವಾತಂತ್ರ್ಯ ಚಳುವಳಿಯ ನೇತಾರರಾಗಿ ಇಡೀ ವಿಶ್ವದ ಗಮನ ಸೆಳೆದರು, ಮಹಾತ್ಮ ಗಾಂಧಿಯಾದರು.

ಗಾಂಧೀಜಿ ತನಗೆ ಕೊಟ್ಟ ಚಪ್ಪಲಿಗಳನ್ನು ಜನರಲ್ ಸ್ಮಟ್ಸ್ ಬೇಸಿಗೆ ಕಾಲದಲ್ಲಿ ತನ್ನ ತೋಟದಲ್ಲಿ ನಡೆದಾಡಲು ಬಳಸುತ್ತಿದ್ದನಂತೆ. ಮಹಾತ್ಮರ ಈ ಕೊಡುಗೆಯನ್ನು ಪಡೆದ ೨೫ ವರ್ಷಗಳ ನಂತರ, ಗಾಂಧೀಜಿಯ ೭೦ ನೇ ಜನ್ಮದಿನದಂದು ಜನರಲ್ ಸ್ಮಟ್ಸ್, ಅವರಿಗೆ ಈ ಚಪ್ಪಲಿಗಳನ್ನು ಗೌರವದಿಂದ ಹಿಂದಿರುಗಿಸಿದ ಮತ್ತು ಹುಟ್ಟುಹಬ್ಬದ ಶುಭಾಶಯ ಕೋರಿ ಹೀಗೆ ಕಾಗದ ಬರೆದ: "ಈ ಮಹಾನ್ ವ್ಯಕ್ತಿ ನಿರ್ಮಿಸಿದ ಚಪ್ಪಲಿಗಳನ್ನು ಮೆಟ್ಟುವ ಯೋಗ್ಯತೆ ಇಲ್ಲದಿದ್ದರೂ, ನಾನು ಇವುಗಳನ್ನು ಅನೇಕ ಬೇಸಿಗೆಗಳಲ್ಲಿ ಮೆಟ್ಟಿ ಓಡಾಡಿದ್ದೇನೆ. ಈ ವ್ಯಕ್ತಿಯ ಮಹತ್ವವನ್ನು ಆ ದಿನಗಳಲ್ಲೇ ಅರಿತುಕೊಂಡೆನಾದರೂ, ಗೌರವಿಸಿದೆನಾದರೂ, ಅವರ ವಿರೋಧಿಯಾಗಿ ನಿಲ್ಲಬೇಕಾದದ್ದು ನನ್ನ ಹಣೆಬರಹವಾಗಿತ್ತು. ಅವರು ಎಂತಹ ಬಿಗಿಪರಿಸ್ಥಿತಿಯಲ್ಲೂ ಸಹನೆ ಕಳೆದುಕೊಳ್ಳಲಿಲ್ಲ, ಅದರ ಹಿನ್ನೆಲೆಯಲ್ಲಿ ಇರುವ ಮಾನವೀಯ ಮುಖವನ್ನು ನೋಡಲು ಮರೆಯಲಿಲ್ಲ, ದ್ವೇಷಕ್ಕೆ ವಶರಾಗಲಿಲ್ಲ. ಎಂತಹ ಇಕ್ಕಟ್ಟಿನ ಸಮಯದಲ್ಲೂ ತಮ್ಮ ಹಾಸ್ಯಪ್ರಜ್ಞೆಯನ್ನು ಜೀವಂತವಾಗಿಯೇ ಇಟ್ಟುಕೊಂಡಿದ್ದರು. ಇವರ ರೀತಿನೀತಿಗಳು ಸಾಮಾನ್ಯವಾಗಿ ಆಚರಣೆಯಲ್ಲಿರುವ ನಿರ್ದಯ ಅಮಾನವೀಯ ವಿಧಾನಗಳಿಂದ ಬೇರೆಯಾಗಿಯೇ ನಿಲ್ಲುತ್ತವೆ."